ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 204
2 ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
3 ಉತ್ತರಿಸುವ ದಿನಾಂಕ : 17.02.2022
4 ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಪಿ.ಸಿ ಹುದ್ದೆಯಿಂದ ಪಿ.ಎಸ್.ಐ ಹುದ್ದೆಗಳ ವಿವರ ಜೊತೆಗೆ ಖಾಲಿ ಇರುವ ಹುದ್ದೆಗಳ ವಿವರ ನೀಡುವುದು.	ರಿಕ್ತಸ್ಥಾನದ ಮಾಹಿತಿ ಅನುಬಂಧ – ಎ ರಲ್ಲಿ ಲಗತ್ತಿಸಿದೆ.
(ಆ)	ಇಲಾಖೆಯಲ್ಲಿ ಪ್ರಸ್ತುತ 70:30 ಅನುಪಾತದಲ್ಲಿ ಪಿ.ಎಸ್.ಐ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆಯೇ; (2015 ರಿಂದ 2021ರ ಅಕ್ಟೋಬರ್ ಅಂತ್ಯದವರೆಗೆ ವಿವರ ನೀಡುವುದು)	ಪೊಲೀಸ್ ಇಲಾಖೆಯಲ್ಲಿ 2015 ರಿಂದ 2021ರವರೆಗೆ 70:30ರ ಅನುಪಾತದಲ್ಲಿ ಪಿ.ಎಸ್.ಐ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. 2015 ರಿಂದ 2021ರವರೆಗೆ ಮಾಡಲಾದ ಮುಂಬಡ್ತಿ ಮತ್ತು ನೇರ ನೇಮಕಾತಿ ವಿವರಗಳನ್ನು ಅನುಬಂಧ – ಬಿ ರಲ್ಲಿ ಲಗತ್ತಿಸಿ ಕಳುಹಿಸಿದೆ.
(ಇ)	ಎ.ಎಸ್.ಐ ದರ್ಜೆಯ ಅಧಿಕಾರಿಗಳ ಗ್ರೇಡೇಷನ್ ಪಟ್ಟಿಯನ್ನು ತಯಾರಿಸಲಾಗಿದೆಯೇ;	ಎ.ಎಸ್.ಐ ಹುದ್ದೆಯ ಜೇಷ್ಠತಾ ಪಟ್ಟಿಗಳನ್ನು ಆಯಾ ಕಮೀಷನರೇಟ್/ಘಟಕಗಳಲ್ಲಿ ಪ್ರತಿ ವರ್ಷ ಪ್ರಕಟಿಸಲು ಸೂಚಿಸಿದ್ದು, ಪ್ರಕಟಿಸಲಾಗುತ್ತಿರುತ್ತದೆ.
(ಈ)	ಪಿ.ಎಸ್.ಐ ದರ್ಜೆ ಹುದ್ದೆಗಳ ಅನುಪಾತ 70:30 ರಿಂದ 50:50ರ ಅನುಪಾತಕ್ಕೆ ಪರಿಷ್ಕರಿಸಿ ಹುದ್ದೆಗಳನ್ನು ಭರ್ತಿ ಮಾಡಲು ಇರುವ ಅನಾನುಕೂಲಗಳೇನು?	ಪಿ.ಎಸ್.ಐ (ಸಿವಿಲ್) ಹುದ್ದೆಯು ಪೊಲೀಸ್ ಇಲಾಖೆಯಲ್ಲಿ ಪ್ರಮುಖ ಹುದ್ದೆಯಾಗಿದ್ದು, ಸಂಬಂಧಪಟ್ಟ ಠಾಣಾ ವ್ಯಾಪ್ತಿಯ ಸಂಪೂರ್ಣ ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆ, ಅಪರಾಧ ತಡೆಗಟ್ಟುವಿಕೆ, ಅಪರಾಧ ಪ್ರಕರಣಗಳ ಪತ್ತೆ ಮತ್ತು ತನಿಖೆ ಇವರ ಮುಖ್ಯ ಕರ್ತವ್ಯವಾಗಿರುತ್ತದೆ. ಈ ಕರ್ತವ್ಯಗಳನ್ನು ನಿರ್ವಹಿಸಲು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಡರಾದ ಹಾಗೂ ತಾಂತ್ರಿಕ ನೈಪುಣ್ಯತೆಯುಳ್ಳ ಯುವ ಅಧಿಕಾರಿಗಳ ಅವಶ್ಯಕತೆ ಇರುವುದರಿಂದ ಶೇ.70:30ರ ಅನುಪಾತ ನಿಗಧಿಪಡಿಸಲಾಗಿರುತ್ತದೆ.
(ಉ)	ಪ್ರಸ್ತುತ ಪಿ.ಎಸ್.ಐ ದರ್ಜೆ ಹುದ್ದೆಗಳ ಅನುಪಾತ 70:30 ರಿಂದ 50:50ರ ಅನುಪಾತಕ್ಕೆ ಪರಿಷ್ಕರಿಸಲು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆ ಹಾಗೂ ಅದರ ವಿವರವನ್ನು ಒದಗಿಸುವುದು;	ಪೊಲೀಸ್ ಇಲಾಖೆಯಲ್ಲಿ ಇತರೆ ಇಲಾಖೆಗಳಂತೆ 50:50ರ ಅನುಪಾತದಲ್ಲಿ ನಿಗಧಿಗೊಳಿಸುವ ಯಾವುದೇ ಪ್ರಸ್ತಾವನೆ ಇಲಾಖೆಯ ಮುಂದೆ ಇರುವುದಿಲ್ಲ.

(ಊ)	ಎ.ಎಸ್.ಐ ಹುದ್ದೆಯ ಅಧಿಕಾರಿಗಳಿಗೆ ಪತ್ರಾಂಕಿತ ವೇತನವನ್ನು 15 ದಿವಸಗಳ ಬದಲಿಗೆ 30 ದಿವಸಕ್ಕೆ ಹೆಚ್ಚಿಸಲು ಅವಕಾಶ ಇದೆಯೇ; ಈ ವ್ಯವಸ್ಥೆಯು ಅಗ್ನಿಶಾಮಕ ಘಟಕದಲ್ಲಿ ಇದ್ದು, ಇದನ್ನು ಇತರೆ ವಿಭಾಗದ ಪೊಲೀಸ್ ಅಧಿಕಾರಿಗಳಿಗೆ ವಿಸ್ತರಿಸಬಾರದೇಕೆ?	ಪ್ರಸ್ತುತ ಎ.ಎಸ್.ಐ ಮತ್ತು ಪಿ.ಎಸ್.ಐ ರವರುಗಳಿಗೆ ನೀಡಲಾಗುತ್ತಿರುವ 15 ದಿನಗಳ ಪತ್ರಾಂಕಿತ ರಜಾ ಸೌಲಭ್ಯವನ್ನು 30 ದಿನಗಳಿಗೆ ವಿಸ್ತರಿಸಲು ಹಾಗೂ ಪಿ.ಐ ಹುದ್ದೆಯಿಂದ ಎಸ್.ಪಿ (ನಾನ್ ಐ.ಪಿ.ಎಸ್) ಹುದ್ದೆಯವರೆಗೆ 30 ದಿನಗಳ ಪತ್ರಾಂಕಿತ ರಜಾ ಸೌಲಭ್ಯವನ್ನು ಮಂಜೂರು ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

ಸಂಖ್ಯೆ: ಒಇ 19 ಪಿಇಐ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ-ಎ

KARNATAKA STATE POLICE FORCE STRENGTH DETAILS AS ON 31/10/2021

Sl. No.	Rank	Sanctioned Strength	Actual Strength		Actual Strength Total	Vacancy
			Men	Women		
1	PSI (CIVIL)	3598	2101	625	2726	872
2	ASI (CIVIL)	5932	5572	208	5780	152
3	HC (CIVIL)	17797	16139	1380	17519	278
4	PC (CIVIL)	35114	24812	5676	30488	4626
5	DSI (CID)	70	43	3	46	24
6	PSI(INTELLIGENCE)	100	75	18	93	7
7	RSI (CAR/DAR)	487	337	0	337	150
8	ARSI (CAR/DAR)	2109	1951	0	1951	158
9	AHC (CAR/DAR)	6349	5852	0	5852	497
10	APC (CAR/DAR)	13624	10616	0	10616	3008
11	PSI (FPB)	52.	37	5	42	10
12	ASI(FPB)	11	5	0	5	6
13	HC (FPB)	32	24	2	26	6
14	PC (FPB)	64	54	5	59	5
15	PSI (WIRELESS)	177	119	10	129	48
16	ASI (WIRELESS)	351	319	0	319	32
17	HC (WIRELESS)	593	432	31	463	130
18	PC (WIRELESS)	451	245	24	269	182
19	RSI (KSRP)	349	262	5	267	82
20	ARSI (KSRP)	1278	1176	0	1176	102
21	RHC (KSRP)	3888	3685	72	3757	131
22	RPC (KSRP)	7888	5398	69	5467	2421
23	PSI (KSISF)	225	87	16	103	122
24	ASI (KSISF)	378	16	0	16	362
25	HC (KSISF)	465	387	16	403	62
26	PC (KSISF)	1744	1462	163	1625	119
TOTAL		**103126**	**81206**	**8328**	**89534**	**13592**

<u>ಅನುಬಂಧ-ಬಿ</u>

ಕ್ರ.ಸಂ	ವರ್ಷ	ಉಂಟಾದ ರಿಕ್ತ ಸ್ಥಾನದಲ್ಲಿ		ಭರ್ತಿ ಮಾಡಲಾದ ಹುದ್ದೆಗಳು	
		ನೇರ	ಮುಂಬಡ್ತಿ	ನೇರ	ಮುಂಬಡ್ತಿ
1	2015	423	206	214	226
2	2016	486	246	393	234
3	2017	750	335	208	257
4	2018	349	140	168	57
5	2019	720	345	326	299
6	2020	880	368	493	280
7	2021	548	244	375	169